# ಕರಾಮುವಿ ಸುದ್ದಿ ಪತ್ರಿಕೆ

# KSOU NewsLetter

Volume: 4 Issue: 4 JULY-AUGUST 2025

ಆಂತರಿಕ ಪ್ರಸಾರಕ್ಕೆ ಮಾತ್ರ

ಸಂಪುಟ: 4 । ಸಂಚಿಕೆ: 4 । ಜುಲೈ – ಆಗಸ್ಟ್ 2025


## 516ನೇ ನಾಡಪ್ರಭು ಕೆಂಪೇಗೌಡರ ಜಯಂತಿ ಮಹೋತ್ಸವ







ದಿನಾಂಕ: 04.07.2025ರಂದು ಕರಾಮುವಿಯ ಘಟಿಕೋತ್ಸವ ಭವನದಲ್ಲಿ ಡೀನ್(ಶೈಕ್ಷಣಿಕ) ಹಾಗೂ ಕೆಂಪೇಗೌಡರ ಅಧ್ಯಯನ ಮತ್ತು ವಿಸ್ತರಣಾ ಕೇಂದ್ರದ ವತಿಯಿಂದ 516ನೇ ನಾಡಪ್ರಭು ಕೆಂಪೇಗೌಡರ ಜಯಂತಿ ಮಹೋತ್ಸವವನ್ನು ಆಚರಿಸಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರಾಮುವಿಯ ಕುಲಪತಿಗಳಾದ ಪ್ರೊ.ಶರಣಪ್ಪ ವಿ ಹಲಸೆ ರವರು ವಹಿಸಿದ್ದರು ಹಾಗೂ ಮೈಸೂರಿನ ಶ್ರೀ ಆದಿಚುಂಚನಗಿರಿ ಶಾಖಾ ಮಠದ ಸ್ವಾಮೀಜಿಯವರಾದ ಶ್ರೀ ಶ್ರೀ ಶ್ರೀ ಸೋಮನಾಥ ಸ್ವಾಮಿಜಿ ರವರು ದಿವ್ಯ ಸಾನಿದ್ಯ ವಹಿಸಿದ್ದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಚಾಮರಾಜ ವಿಧಾನ ಸಭಾ ಕ್ಷೇತ್ರದ ಸದಸ್ಯರು ಹಾಗೂ ಕರಾಮುವಿಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರಾದ ಕೆ. ಹರೀಶ್‌ಗೌಡ ರವರು ಆಗಮಿಸಿದ್ದರು. ಖ್ಯಾತ ವೈದ್ಯರಾದ ಡಾ. ಎಸ್.ಪಿ.ಯೋಗಣ್ಣರವರು ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಿದರು ಹಾಗೂ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವರಾದ ಪ್ರೊ. ಎಂ.ಜಿ ಮಂಜುನಾಥ್ ರವರು ಕೆಂಪೇಗೌಡರ ಜೀವಮಾನದ ಶ್ರೇಷ್ಠ ಸಾಧನೆಗಳ ಕುರಿತು ವಿಶೇಷ ಉಪನ್ಯಾಸವನ್ನು ನೀಡಿದರು.




ಈ ಸಂದರ್ಭದಲ್ಲಿ ಕರಾಮುವಿಯ ಕುಲಸಚಿವರಾದ ಪ್ರೊ.ಎಸ್.ಕೆ. ನವೀನ್‌ಕುಮಾರ್, ಡೀನ್ (ಶೈಕ್ಷಣಿಕ) ಪ್ರೊ.ಎಂ.ರಾಮನಾಥಂ ನಾಯುಡು, ಡೀನ್ ಅಧ್ಯಯನ ಕೇಂದ್ರಗಳ ಡಾ. ಎನ್.ಆರ್. ಚಂದ್ರೇಗೌಡ, ಪರೀಕ್ಷಾಂಗ ಕುಲಸಚಿವರಾದ ಡಾ. ಸಿ. ಎಸ್. ಆನಂದ್ ಕುಮಾರ್, ಹಣಕಾಸು ಅಧಿಕಾರಿ ಪ್ರೊ. ಎಸ್. ನಿರಂಜನ್ ರಾಜ್, ಡಾ. ಪಿ. ಬೋರೇಗೌಡರವರು, ನಾಡಪ್ರಭು ಕೆಂಪೇಗೌಡರ ಅಧ್ಯಯನ ಮತ್ತು ವಿಸ್ತರಣಾ ಕೇಂದ್ರದ ಸಂಯೋಜನಾಧಿಕಾರಿಯಾದ ಡಾ.ಸಿ.ರಾಮೇಗೌಡರು ಹಾಗೂ ಕ.ರಾ.ಮು.ವಿ.ಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು, ಮಾಧ್ಯಮದವರು, ಜನಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಡಾ. ಬಾಬು ಜಗಜೀವನರಾಮ್ ರವರ ಪುಣ್ಯಸ್ಮರಣೆ 2



79ನೇ ಸ್ವಾತಂತ್ರ್ಯ ದಿನಾಚರಣೆ 5




National Space Day -2025 7





# "ಡಾ. ಬಾಬು ಜಗಜೀವನರಾಮ್"ರವರ ಪುಣ್ಯಸ್ಮರಣೆ

ದಿನಾಂಕ:06–07–2025 ರಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಡಾ. ಬಾಬು ಜಗಜೀವನ ರಾಮ್ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ವತಿಯಿಂದ "ಡಾ. ಬಾಬು ಜಗಜೀವನರಾಮ್" ರವರ ಪುಣ್ಯಸ್ಮರಣೆ ಪ್ರಯುಕ್ತ ರೈಲ್ವೆ ನಿಲ್ದಾಣದ ಬಳಿ ಇರುವ ಡಾ. ಬಾಬು ಜಗಜೀವನರಾಮ್ ರವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ನಂತರ ವಿಶ್ವವಿದ್ಯಾನಿಲಯದ ಡಾ. ಬಾಬು ಜಗಜೀವನ ರಾಮ್ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದಲ್ಲಿ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡೀನ್ (ಶೈಕ್ಷಣಿಕ)ರಾದ ಪ್ರೊ. ರಾಮನಾಥಂ ನಾಯುಡು ರವರು ವಹಿಸಿದ್ದರು.



ವಿಶೇಷ ಉಪನ್ಯಾಸವನ್ನು ಡೀನ್ (ಅಧ್ಯಯನ ಕೇಂದ್ರ)ದ ಡಾ.ಎನ್.ಆರ್. ಚಂದ್ರೇಗೌಡರು ಡಾ. ಬಾಬು ಜಗಜೀವನ ರಾಮ್ ರವರ ಬಾಲ್ಯ ಜೀವನ ಮತ್ತು ರಾಜಕೀಯ ಸೂಕ್ಷ್ಮತೆ ಮತ್ತು ಸಾಧನೆ ಬಗ್ಗೆ ತಿಳಿಸಿಕೊಟ್ಟರು, ಡಾ. ಬಾಬು ಜಗಜೀವನರಾಮ್ ಪೀಠದ ನಿರ್ದೇಶಕರಾದ ಡಾ. ಆರ್. ಶರಣಮ್ಮ ರವರು ಪ್ರಾಸ್ತಾವಿಕ ನುಡಿ ಭಾಷಣ ಮಾಡಿದರು, ಸ್ವಾಗತ ಭಾಷಣವನ್ನು ಡಾ. ಜೆ.ಎಸ್. ಚಂದ್ರಶೇಖರ್ ಸಹ ಪ್ರಾಧ್ಯಾಪಕರು ಪರಿಸರ ವಿಜ್ಞಾನ ರವರು ನಡೆಸಿಕೊಟ್ಟರು.

ಈ ಸಂದರ್ಭದಲ್ಲಿ ಕ.ರಾ.ಮು.ವಿ.ಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಕೆ-ಸೆಟ್ ಮತ್ತು ಯಜಿಸಿ-ನೆಟ್ ಪರೀಕ್ಷೆಗಳ ತರಬೇತಿ ಶಿಬಿರ

ದಿನಾಂಕ:16.07.2025ರಂದು ಕರಾಮುವಿಯ ಸ್ಪರ್ಧಾತ್ಮಕ ಪರೀಕ್ಷಾ ತರ ಬೇತಿ ಕೇಂದ್ರದ ವತಿಯಿಂದ ಕೆ–ಸೆಟ್ ಮತ್ತು ಯಜಿಸಿ–ನೆಟ್ ಪರೀಕ್ಷೆಗಳ ತರಬೇತಿ ಶಿಬಿರವನ್ನು ಕಾವೇರಿ ಸಭಾಂಗಣದಲ್ಲಿ ಆಯೋಜಿಸ ಲಾಯಿತು. ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಹಿರಿಯ ಐ.ಎ.ಎಸ್., ಅಧಿಕಾರಿ ಅಕ್ರಂ ಪಾಷ ಉದ್ಘಾಟಿಸಿ ಸ್ಪರ್ಧೆಯಲ್ಲಿ ಗೆಲುವು ಸುಲಭವಲ್ಲ, ಭಯ ಇರಬೇಕು. ಆ ಭಯ ನಿಮ್ಮನ್ನು ಸದಾ ಎಚ್ಚರಗೊಳಿಸಿ ಗೆಲುವಿನ ದಾರಿ ತೋರಿಸಬೇಕು. ಹೀಗಾಗಿ ಬದಲಾದ, ಸಮಯ ಮತ್ತು ಪ್ರಯತ್ನಕ್ಕೆ ಬದ್ಧರಾಗಿರಿ ಯುವ ಜನರು ಸಾಮಾಜಿಕ ಕಳಕಳಿ ಬೆಳೆಸಿಕೊಳ್ಳಬೇಕು. ನೀವು ಮುಂದೆ ಅಧಿಕಾರಿಗಳಾದಾಗ ನಿಮ್ಮ ಊರು, ನಿಮ್ಮ ಶಾಲೆಗಳಿಗೆ ನೆರವು ನೀಡಿ. ನಿಮ್ಮ ಕ್ಷೇತ್ರದಲ್ಲಿ ಸಾಧನೆ ಮಾಡಿ ಅನೇಕ ಸುಧಾರಣೆಗಳನ್ನು ತನ್ನಿ ಎಂದು ಅವರು ತಮ್ಮ ವೃತ್ತಿ ಜೀವನದ ಅನುಭವಗಳನ್ನು ಬಿಚ್ಚಿಟ್ಟರು.

ಈ ಸಂದರ್ಭದಲ್ಲಿ ಕರಾಮುವಿಯ ಕುಲಪತಿಗಳಾದ ಪ್ರೊ.ಶರಣಪ್ಪ ವಿ. ಹಲಸೆ, ಕುಲಸಚಿವರಾದ ಪ್ರೊ.ಎಸ್.ಕೆ. ನವೀನ್ ಕುಮಾರ್, ಶೈಕ್ಷಣಿಕ ಡೀನ್ ಪ್ರೊ.ಎಂ.ರಾಮನಾಥಂ ನಾಯುಡು, ಅಧ್ಯಯನ ಕೇಂದ್ರಗಳ ಡೀನ್ ಡಾ. ಎನ್.ಆರ್. ಚಂದ್ರೇಗೌಡ, ಪರೀಕ್ಷಾಂಗ ಕುಲಸಚಿವರಾದ




ಡಾ. ಸಿ.ಎಸ್. ಆನಂದ್ ಕುಮಾರ್, ಹಣಕಾಸು ಅಧಿಕಾರಿ ಪ್ರೊ. ಎಸ್. ನಿರಂಜನ್ ರಾಜ್ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ಹಾಗೂ ವಿಶೇಷ ಆಹ್ವಾನಿತರು, ಅಧ್ಯಾಪಕರು, ಸಂಶೋಧಕರು, ಕರಾಮುವಿಯ ಸಿಬ್ಬಂದಿಗಳು, ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# "ಭಾರತದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪ್ರಗತಿಗೆ ಡಾ. ಬಾಬು ಜಗಜೀವನರಾಮ್ ರವರ ಕೊಡುಗೆಗಳು" ಎಂಬ ವಿಷಯ ಕುರಿತು ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ ಕಾರ್ಯಕ್ರಮ





ದಿನಾಂಕ:18-07-2025 ರಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಡಾ. ಬಾಬು ಜಗಜೀವನ ರಾಮ್ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ವತಿಯಿಂದ "ಭಾರತದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪ್ರಗತಿಗೆ ಡಾ. ಬಾಬು ಜಗಜೀವನರಾಮ್ ರವರ ಕೊಡುಗೆಗಳು" ಎಂಬ ವಿಷಯ ಕುರಿತು ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ ಕಾರ್ಯಕ್ರಮವನ್ನು ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ. ಶರಣಪ್ಪ ವಿ. ಹಲಸೆ ರವರು ವಹಿಸಿದ್ದರು, ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಸನ್ಮಾನ್ಯ ಡಾ. ಹೆಚ್.ಸಿ. ಮಹದೇವಪ್ಪ ನವರು ದೀಪ ಬೆಳಗುವುದರ ಮೂಲಕ ನೆರವೇರಿಸಿಕೊಟ್ಟರು. ಉದ್ಘಾಟನಾ ಭಾಷಣದಲ್ಲಿ ಡಾ. ಬಾಬು ಜಗಜೀವನರಾಮ್ ರವರ ಕೊಡುಗೆಗಳ ಬಗ್ಗೆ ಕುರಿತು ಮಾತನಾಡಿ, ಭಾರತದ ಪ್ರಜಾಪ್ರಭುತ್ವ, ಸಂವಿಧಾನ, ಆಡಳಿತ ಚರ್ಚೆಯ ವಿಷಯಗಳಾಗಿವೆ ಅವೆಲ್ಲವನ್ನು ಸಾಮಾನ್ಯ ಜನರಿಗೆ ತಲುಪಿಸುವಲ್ಲಿ ಹೆಣಗಾಡುವ ಪರಿಸ್ಥಿತಿ ಎದುರಾಗಿದೆ. ನೈತಿಕತೆ ಕಳೆದು ಹೋಗಿ, ಸಾಂಸ್ಕೃತಿಕ ನಾಯಕತ್ವ ಕುಸಿದಂತಿದೆ ಎಂದು ವಿಷಾದಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಕರ್ನಾಟಕ ರಾಜ್ಯ ಸರ್ಕಾರದ ಆಹಾರ ಮತ್ತು ನಾಗರೀಕ ಸರಬರಾಜು ಗ್ರಾಹಕ ವ್ಯವಹಾರಗಳ ಸಚಿವರಾದ ಸನ್ಮಾನ್ಯ ಶ್ರೀ ಕೆ. ಹೆಚ್. ಮುನಿಯಪ್ಪನವರು ಅಂಬೇಡ್ಕರ್‌ಅವರ ಹೋರಾಟದಂತೆ ಬಾಬು ಜಗಜೀವನರಾಮ್ ಅವರು ಹೋರಾಟ ನಡೆಸಿ, ಸಮಾನತೆಯ ಹರಿಕಾರರಾಗಿದ್ದಾರೆ. ಅವರು ಜೀವನದಲ್ಲಿ ಬಹಳ ದೂರ ದೃಷ್ಠಿಯಿಂದ ಸಮಾಜದಲ್ಲಿ ಅಸ್ಪೃಶ್ಯತೆ ಶೋಷಣೆ ವಿರೋಧಿಸಿ, ಸಮಾನತೆಯ ಆಶಯದಲ್ಲಿ ಹಲವು ಕ್ಷೇತ್ರದಲ್ಲಿ ಮೀಸಲಾತಿ ಕಾನೂನು ಜಾರಿಗೆ ತಂದಿದ್ದಾಗಿ ಅವರು ಹೇಳಿದರು ಮತ್ತು ಬಾಬು ಜಗಜೀವನರಾಮ್ ರವರು ಈ ದೇಶ ಕಂಡ ಶ್ರೇಷ್ಠ ರಾಜಕೀಯ ಮುತ್ಸದ್ಧಿ, ದಲಿತರ, ತುಳಿತಕ್ಕೊಳಗಾದವರ, ಶ್ರಮಿಕರ ಹಾಗೂ ಎಲ್ಲಾ ವರ್ಗದ ಅಭಿವೃದ್ಧಿಗೆ ಪೂರಕವಾಗಿ ಅವರ ಜೀವನವನ್ನು ಮುಡುಪಾಗಿಟ್ಟ ಮಹಾನ್ ಚೇತನ. ಅವರ ಚಿಂತನೆಗಳು ನಮ್ಮ ಸಮಾಜದ ಯುವಜನತೆಗೆ ಪ್ರೇರಣೆಯಾಗಿವೆ ಎಂದರು. ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನ ಪ್ರಾಧ್ಯಾಪಕರಾದ ಪ್ರೊ.ತಿಮ್ಮರಾಯಪ್ಪರವರು ಡಾ.ಬಾಬು ಜಗಜೀವನ ರಾಮ್ ರವರ ಬಾಲ್ಯ ಜೀವನ ಮತ್ತು ರಾಜಕೀಯ ಸೂಕ್ಷ್ಮತೆ ಮತ್ತು ಸಾಧನೆಗಳ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ಡಾ. ಬಾಬು ಜಗಜೀವನರಾಮ್ ಪೀಠದ ನಿರ್ದೇಶಕರಾದ ಡಾ. ಆರ್. ಶರಣಮ್ಮ ರವರು ಪ್ರಾಸ್ತಾವಿಕ ನುಡಿ ಹಾಗೂ ಸ್ವಾಗತ ಭಾಷಣ ಮಾಡಿದರು.

ಈ ಸಂದರ್ಭದಲ್ಲಿ ಡಾ. ಬಾಬು ಜಗಜೀವನರಾಮ್ ರವರ ಕುರಿತ ಪುಸ್ತಕ ಬಿಡುಗಡೆ ಮತ್ತು ಡಾ. ಬಾಬು ಜಗಜೀವನರಾಮ್‌ರವರ ಸಾಕ್ಷ್ಯ ಚಿತ್ರವನ್ನು ಬಿಡುಗಡೆಗೊಳಿಸಲಾಯಿತು. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ 95%ರಷ್ಟು ಅಂಕವನ್ನು ಪಡೆದ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಈ ಸಂದರ್ಭದಲ್ಲಿ ಕುಲಸಚಿವರಾದ ಪ್ರೊ. ಎಸ್.ಕೆ. ನವೀನ್ ಕುಮಾರ್, ಪರೀಕ್ಷಾಂಗ ಕುಲಸಚಿವರಾದ ಡಾ. ಸಿ.ಎಸ್. ಆನಂದ್ ಕುಮಾರ್ ಹಾಗೂ ವಿಶ್ವವಿದ್ಯಾನಿಲಯದ ವ್ಯವಸ್ಥಾಪನ ಮಂಡಳಿ ಸದಸ್ಯರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಆರ್.ಹೆಚ್.ಪವಿತ್ರರವರು ನಡೆಸಿಕೊಟ್ಟರು. ಕಾರ್ಯಕ್ರಮದ ವಂದನಾರ್ಪಣೆಯನ್ನು ಪರಿಸರ ವಿಜ್ಞಾನ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಜೆ.ಎಸ್. ಚಂದ್ರಶೇಖರ್ ರವರು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಕ.ರಾ.ಮು.ವಿ,ಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು, ಮಾಧ್ಯಮದವರು, ಜನಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



# Indian Council of Social Science Research (ICSSR), New Delhi Sponsored Ten Days 'Research Methodology Course

The Department of Library and Information Science and KSOU library at Karnataka State Open University, Mysuru successfully organized a 10-day Research Methodology Course for Women Research Scholars from 21/07/2025 to 30/07/2025, with the financial support of the Indian Council of Social Science Research (ICSSR), New Delhi. The course was designed to enhance the research competencies of women scholars from various social science disciplines by offering a structured and intensive training programme. The overarching aim of the course was to provide conceptual clarity, methodological insights, and hands-on training required for undertaking quality research and academic writing.

A total of 30 women research scholars from different universities and institutions across India participated in the programme. The participants were selected based on their academic background, research interests, and recommendations. They represented a wide spectrum of disciplines within the social sciences and brought with them diverse perspectives and experiences, which enriched the interactions throughout the course.



The course was inaugurated on 21st July 2025 in the presence of distinguished guests, including Prof. Chandramouli, Prof. Lalitha Aswath, Hon'ble Vice-Chancellor of KSOU Prof. Sharanappa V. Halse, Dean (Academic) Prof. Ramanatham Naidu, Dean (Study Centres) Prof. N. R. Chandregowda, and Finance Officer Prof. Niranjan Raj. The dignitaries spoke about the significance of such training programmes in nurturing academic excellence among women researchers. The inaugural address emphasized the importance of developing a sound research orientation and the need to engage meaningfully with research tools and ethics.

Over the ten days, the course was structured into seventeen thematic sessions covering key aspects of research methodology. These included foundational themes such as meaning and aspects of research, research design, hypothesis formulation and testing, and survey methods. Participants were introduced to both qualitative and quantitative research approaches, tools for data collection such as interviews, observation, and case studies, as well as basic statistical



analysis. The course also covered practical aspects such as research report writing, academic writing skills, e-resources for research, and an in-depth discussion on ethical issues in social science research and the publication process.

Special focus was given to sessions on data analysis using R software, where participants were trained in the basics of data handling and interpretation. The "Paper Clinic" session offered a platform for participants to present their research proposals or ongoing work and receive critical feedback from senior academicians. This interactive component was particularly appreciated by the participants as it provided individual guidance and encouraged academic discussion.

Throughout the programme, the sessions were delivered by eminent scholars and subject experts from reputed institutions. The lectures were highly interactive and were supplemented with practical exercises, case studies, and hands-on demonstrations. Participants were also introduced to research tools such as referencing software, online databases, and anti-plagiarism tools.

The course concluded with a valedictory session on 30/07/2025. Certificates were distributed to the participants, and several of them shared their experiences and feedback. The participants overwhelmingly appreciated the structure, depth, and delivery of the sessions. They expressed that the course significantly boosted their confidence in pursuing independent research and suggested similar programmes be organized regularly. Many expressed interests in more advanced training in data analysis and writing for publication.

This Research Methodology Course achieved its objectives by not only imparting theoretical knowledge and practical skills but also fostering an environment of academic collaboration, discussion, and mentoring. The organizing committee expresses sincere gratitude to the Indian Council of Social Science Research (ICSSR) for sponsoring the programme and to the university administration for its support. Special thanks are due to all the resource persons for sharing their expertise, to the participants for their active involvement, and to the support staff for their dedicated service in ensuring the smooth conduct of the course.

# 2025-26ನೇ ಶೈಕ್ಷಣಿಕ ಸಾಲಿನ ಜುಲೈ ಆವೃತ್ತಿಯ ಪ್ರವೇಶಾತಿ ಸಂಬಂಧ ಪತ್ರಿಕಾಗೋಷ್ಠಿ




ದಿನಾಂಕ:25.07.2025ರಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2025–26ನೇ ಸಾಲಿನ ಜುಲೈ ಆವೃತ್ತಿಯ ಪ್ರವೇಶಾತಿ ಪ್ರಕ್ರಿಯೆ ಸಂಬಂಧ ಕಲಬುರ್ಗಿ ಮತ್ತು ಬೀದರ್‌ನಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಪತ್ರಿಕಾಗೋಷ್ಠಿಯನ್ನು ನಡೆಸಲಾಯಿತು.

ಪತ್ರಿಕಾಗೋಷ್ಠಿಗಳಲ್ಲಿ ಆಯಾ ಭಾಗದ ಪ್ರಾದೇಶಿಕ ನಿರ್ದೇಶಕರುಗಳೂ ಸಹ ಭಾಗವಹಿಸಿದ್ದು, ವಿಶ್ವವಿದ್ಯಾನಿಲಯದ ಶೈಕ್ಷಣಿಕ ಕಾರ್ಯಕ್ರಮಗಳ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಆಯಾ ಭಾಗದಲ್ಲಿ ನಡೆಸುವಂತೆ ಮಾನ್ಯ ಕುಲಪತಿಗಳು ಪ್ರಾದೇಶಿಕ ನಿರ್ದೇಶಕರುಗಳಿಗೆ ಸೂಚಿಸಿದರು. ಹಾಗೆಯೇ ಮಾಧ್ಯಮ ಮಿತ್ರರಿಗೆ ವಿಶ್ವವಿದ್ಯಾನಿಲಯದ ಪ್ರವೇಶಾತಿ ಸಂಬಂಧ ಶೈಕ್ಷಣಿಕ ಕಾರ್ಯಕ್ರಮಗಳು ಸಂಪರ್ಕ ಕಾರ್ಯಕ್ರಮಗಳು, ಪ್ರಾಯೋಗಿಕ ತರಗತಿಗಳು ಹಾಗೂ ಇನ್ನಿತರ ವಿಷಯಗಳ ಕುರಿತು ಕೂಲಂಕುಷವಾಗಿ ವಿವರಿಸಿ ಪತ್ರಿಕೆಗಳ ಮೂಲಕ ವಿಶ್ವವಿದ್ಯಾನಿಲಯಲದ ಕಾರ್ಯಚಟುವಟಿಕೆಗಳ ಬಗ್ಗೆ ವಿಸ್ತೃತ ಪ್ರಚಾರ ಮಾಡಲಾಯಿತು.



# ಕರಾಮುವಿಯಲ್ಲಿ ಕಾನೂನು ಅರಿವು ಕಾರ್ಯಕ್ರಮ

ದಿನಾಂಕ:30.07.2025 ರಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಡೀನ್(ಶೈಕ್ಷಣಿಕ) ವಿಭಾಗದಿಂದ ಕಾವೇರಿ ಸಭಾಂಗಣದಲ್ಲಿ ವಿಶ್ವವಿದ್ಯಾನಿಲಯದ ಸಿಬ್ಬಂದಿಗಳಿಗೆ ಮಹಿಳೆಯರ ಸುರಕ್ಷತೆಯ ಕುರಿತು ಕಾನೂನು ಅರಿವು ಕಾರ್ಯಕ್ರಮ ನಡೆಸಲಾಯಿತು. ಮುಖ್ಯ ಅಥಿತಿಯಾಗಿ ಆಗಮಿಸಿದ ಮುನ್ನಡೆ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾದ ಪಿ. ಹೆಚ್. ಯಶೋಧ ಹಾಗೂ ಮುಖ್ಯ ಸಂಪನ್ಮೂಲ ವ್ಯಕ್ತಿಯಾದ ಮೈಸೂರಿನ ಜೆ.ಎಸ್.ಎಸ್, ಕಾನೂನು ಕಾಲೇಜಿನ ಸಿ.ಇ.ಒ ಆದ ಪ್ರೊ. ಸುರೇಶ್, ರವರು ಮಹಿಳೆಯರ ಸುರಕ್ಷತೆಯ ಕುರಿತು ಜಾಗೃತಿ ಮೂಡಿಸಿ, ಸಾಮಾಜಿಕ ಭದ್ರತೆಯನ್ನು ಒದಗಿಸುವುದು ಸಮಾಜದ ಆದ್ಯ ಕರ್ತವ್ಯ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕರಾಮುವಿಯ ಕುಲಪತಿಗಳಾದ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವರಾದ ಪ್ರೊ.ಎಸ್.ಕೆ. ನವೀನ್ ಕುಮಾರ್, ಡೀನ್ (ಶೈಕ್ಷಣಿಕ) ಪ್ರೊ.ಎಂ. ರಾಮನಾಥಂ ನಾಯುಡು, ಪರೀಕ್ಷಾಂಗ ಕುಲಸಚಿವರಾದ ಡಾ. ಸಿ.ಎಸ್. ಆನಂದ್ ಕುಮಾರ್, ಹಣಕಾಸು ಅಧಿಕಾರಿ ಪ್ರೊ. ಎಸ್. ನಿರಂಜನ್ ರಾಜ್ ಹಾಗೂ ಕರಾಮುವಿಯ ಸಿಬ್ಬಂದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಅಲ್ಪಸಂಖ್ಯಾತರ ನಿರ್ದೇಶನಾಲಯದೊಂದಿಗೆ ಪ್ರವೇಶಾತಿ ಸಂಬಂಧ ಒಡಂಬಡಿಕೆ

ದಿನಾಂಕ 09.07.2025 ರಂದು ಬೆಂಗಳೂರಿನ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯ ಕಚೇರಿಯಲ್ಲಿ ಕರ್ನಾಟಕ ಸರ್ಕಾರದ ವಸತಿ, ಅಲ್ಪಸಂಖ್ಯಾತ ಕಲ್ಯಾಣ ಮತ್ತು ವಕ್ಫ್‌ಸಚಿವರಾದ ಶ್ರೀ ಜಮೀರ್ ಅಹಮದ್ ಖಾನ್ ಇವರ ಸಮ್ಮುಖದಲ್ಲಿ, ಕರ್ನಾಟಕದ ಸನ್ಮಾನ್ಯ ಮುಖ್ಯಮಂತ್ರಿಯವರು 2025–26ನೇ ಸಾಲಿನ ಆಯವ್ಯಯ ಮಂಡನೆಯ ಕಂಡಿಕೆ ಸಂಖ್ಯೆ –220ರಲ್ಲಿ ಘೋಷಿಸಿರುವಂತೆ “ಪದವಿ ಶಿಕ್ಷಣದಿಂದ ವಂಚಿತರಾಗುತ್ತಿರುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬೆಂಗಳೂರಿನ ಹಜ್ ಭವನದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ (KSOU) ಪ್ರಾದೇಶಿಕ ಕೇಂದ್ರ ತೆರೆದು ಅಲ್ಪಸಂಖ್ಯಾತ ವರ್ಗದ(ಮುಸ್ಲಿಂ, ಕ್ರೈಸ್ತ, ಜೈನ, ಬೌದ್ಧ. ಸಿಖ್, ಪಾರ್ಸಿ) ವಿದ್ಯಾರ್ಥಿಗಳ ವಿವಿಧ ಪದವಿ/ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೋಮಾ / ಸರ್ಟಿಫಿಕೇಟ್ ಕಾರ್ಯಕ್ರಮಗಳಿಗೆ ಪ್ರವೇಶ ನೀಡುವ ಸಂಬಂಧ ಕುರಿತಂತೆ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿದ್ದು ಈ ಸಮಾರಂಭದಲ್ಲಿ ಅಲ್ಪಸಂಖ್ಯಾತ ಇಲಾಖೆಯ ಅಧಿಕಾರಿಗಳು ಮತ್ತು ಕರಾಮುವಿಯ ಕುಲಸಚಿವರು, ಡೀನ್ (ಶೈಕ್ಷಣಿಕ), ಡೀನ್ ಅಧ್ಯಯನ ಕೇಂದ್ರ, ಪರೀಕ್ಷಾಂಗ ಕುಲಸಚಿವರು, ಹಣಕಾಸು ಅಧಿಕಾರಿಗಳು, ಪ್ರವೇಶಾತಿ ವಿಭಾಗದ ನಿರ್ದೇಶಕರು, ಡೀನ್ (ಶೈಕ್ಷಣಿಕ) ವಿಭಾಗದ ಉಪ ನಿರ್ದೇಶಕರು ಹಾಗೂ ಬೆಂಗಳೂರು ಮತ್ತು ಕರಾಮುವಿಯ ಪ್ರದೇಶಿಕ ಕೇಂದ್ರಗಳ ನಿರ್ದೇಶಕರುಗಳು ಹಾಜರಿದ್ದರು.

### ಕರ್ನಾಟಕ ಸರ್ಕಾರದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಇಲಾಖೆ ಆಯುಕ್ತರಾದ ಶ್ರೀ ದೇವರಾಜ್, ಹಿರಿಯ ಕೆ.ಎ.ಎಸ್ ಅಧಿಕಾರಿಯವರು ಕರಾಮುವಿಯಲ್ಲಿ ಪ್ರವೇಶಾತಿ ಪಡೆದರು.




2025–26ನೇ ಜುಲೈ ಆವೃತಿಯಲ್ಲಿ ಕರ್ನಾಟಕ ಸರ್ಕಾರದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಇಲಾಖೆ ಆಯುಕ್ತರಾದ ಶ್ರೀ ದೇವರಾಜ್, ಹಿರಿಯ ಕೆ.ಎ.ಎಸ್., ಅಧಿಕಾರಿಯವರು ಕರಾಮುವಿಯ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗಕ್ಕೆ ಪ್ರವೇಶಾತಿ ಪಡೆದರು. ಈ ಸಂದರ್ಭದಲ್ಲಿ ಡೀನ್ (ಶೈಕ್ಷಣಿಕ)ರಾದ ಪ್ರೊ.ಎಂ ರಾಮನಾಥಂ ನಾಯುಡು, ಡೀನ್ (ಅಧ್ಯಯನ ಕೇಂದ್ರ)ರಾದ ಡಾ.ಎನ್.ಆರ್.ಚಂದ್ರೇಗೌಡ, ಹಣಕಾಸು ಅಧಿಕಾರಿಯಾದ ಪ್ರೊ.ನಿರಂಜನ್ ರಾಜ್ ಎಸ್, ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪೀಠದ ನಿರ್ದೇಶಕರಾದ ಪ್ರೊ. ಶಲ್ವಪ್ಪಿಳ್ಳೆ ಅಯ್ಯಂಗಾರ್‌ರವರು ಹಾಗೂ ಡಾ.ಟಿ.ಎಸ್. ಹರ್ಷರವರು ಹಾಜರಿದ್ದರು.

## ವ್ಯಸನ ಮುಕ್ತ ದಿನಾಚರಣೆ



ದಿನಾಂಕ:01.08.2025 ರಂದು ಕರಾಮುವಿಯ ಆಡಳಿತ ಭವನದ ಮಂಭಾಗದಲ್ಲಿ ಚಿತ್ತರಗಿಯ ಇಲಕಲ್ಲನ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನ ಮಠದ ಶ್ರೀ ಮ.ನಿ.ಪ್ರ. ಡಾ.ಮಹಾಂತಶಿವಯೋಗಿಗಳ ಜನ್ಮ ದಿನದ ಪ್ರಯುಕ್ತ ವ್ಯಸನ ಮುಕ್ತ ದಿನಾಚರಣೆಯನ್ನು ಪ್ರತಿಜ್ಞಾ ವಿಧಿ ಸ್ವೀಕರಿಸುವ ಮೂಲಕ ಆಚರಿಸಲಾಯಿತು.

ಡಾ.ಮಹಾಂತಶಿವಯೋಗಿಗಳು ಜೀವಮಾನತುಂಬಾ ಜನರಲ್ಲಿರುವ ದುಶ್ಚಟಗಳನ್ನು ಬಿಡಿಸಲು ಶ್ರಮಿಸಿದರು. ಹತ್ತಾರು ಸಾವಿರ ಹಳ್ಳಿಗಳನ್ನು ಸಂಚರಿಸಿ ಲಕ್ಷಾಂತರ ಜನರ ದುಶ್ಚಟಗಳನ್ನು ಬಿಡಿಸಿ ಅವರ ಬದುಕನ್ನು ಹಸನಾಗಿಸಿದ್ದಾರೆ. ಇವರ ಸೇವೆಯನ್ನು ಸರ್ಕಾರ ಗುರುತಿಸಿ ಪೂಜ್ಯರ ಜನ್ಮದಿನ ಆಗಸ್ಟ್ 1 ರಂದು ವ್ಯಸನ ಮುಕ್ತ ದಿನಾಚರಣೆಯನ್ನಾಗಿ ಆಚರಿಸಲು ಸರ್ಕಾರ ಆದೇಶಿಸಿದ ಹಿನ್ನೆಲೆಯಲ್ಲಿ ಕರಾಮುವಿಯ ಕುಲಪತಿಗಳಾದಂತಹ ಪ್ರೊ. ಶರಣಪ್ಪ ವಿ. ಹಲಸೆ, ಕುಲಸಚಿವರಾದ ಪ್ರೊ.ನವೀನ್‌ಕುಮಾರ್.ಎಸ್.ಕೆ, ಡೀನ್ (ಶೈಕ್ಷಣಿಕ)ರಾದ ಪ್ರೊ. ಎಂ.ರಾಮನಾಥಂ ನಾಯುಡು, ಡೀನ್(ಅಧ್ಯಯನಕೇಂದ್ರ)ದ ಡಾ.ಎನ್.ಆರ್. ಚಂದ್ರೇಗೌಡ, ಉಪಕುಲಸಚಿವರಾದ ಶ್ರೀ ಚಂದ್ರೇಶ್.ಆರ್, ಭಾಷಾಂತರ ಅಧ್ಯಯನ ವಿಭಾಗದ ಸಂಯೋಜನಾಧಿಕಾರಿಯಾದ ಡಾ. ಅವರೇಕಾಡು ವಿಜಯ್‌ಕುಮಾರ್ ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಭಾಗವಹಿಸಿ ಮದ್ಯಪಾನ, ಮಾದಕವಸ್ತು, ತಂಬಾಕು ವಸ್ತುಗಳ ವ್ಯಸನ ಮುಕ್ತಗೊಳಿಸುವ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿದರು.



## 79ನೇ ಸ್ವಾತಂತ್ರ್ಯ ದಿನಾಚರಣೆ

ದಿನಾಂಕ:15.08.2025 ರಂದು ಕರಾಮುವಿಯ ಆಡಳಿತ ಭವನದ ಮುಂಭಾಗದಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಪ್ರೊ.ಜಿ. ಹೇಮಂತ್ ಕುಮಾರ್ ರವರು ಧ್ವಜಾರೋಹಣ ಮಾಡುವುದರ ಮೂಲಕ ಕರಾಮುವಿಯ ಸಿಬ್ಬಂದಿಗಳಿಗೆ ಶುಭಾಶಯ ಕೋರಿದರು.

ಈ ಸಂದರ್ಭದಲ್ಲಿ ಕರಾಮುವಿಯ ಕುಲಪತಿಗಳಾದ ಪ್ರೊ. ಶರಣಪ್ಪ ವಿ ಹಲಸೆ, ಕುಲಸಚಿವರಾದ ಪ್ರೊ.ಎಸ್.ಕೆ ನವೀನ್ ಕುಮಾರ್, ಡೀನ್ (ಶೈಕ್ಷಣಿಕ) ರಾದ ಪ್ರೊ. ಎಂ.ರಾಮನಾಥಂ ನಾಯುಡು, ಡೀನ್(ಅಧ್ಯಯನ ಕೇಂದ್ರ) ರಾದ ಡಾ.ಎನ್.ಆರ್ ಚಂದ್ರೇಗೌಡ, ಪರೀಕ್ಷಾಂಗ ಕುಲಸಚಿವರಾದ ಡಾ.ಆನಂದ್ ಕುಮಾರ್ ಸಿ.ಎಸ್, ಸಾಮಾನ್ಯ ವಿಭಾಗದ ಉಪಕುಲಸಚಿವರಾದ ಶ್ರೀ ಚಂದ್ರೇಶ್.ಆರ್, ಶ್ರೀ ಸಿ.ಪಿ.ಸುರೇಶ್, ಭಾಷಾಂತರ ಅಧ್ಯಯನ ವಿಭಾಗದ ಸಂಯೋಜನಾಧಿಕಾರಿಯಾದ ಡಾ.ಅವರೇಕಾಡು ವಿಜಯಕುಮಾರ್, ಆಡಿಯೋ–ಸ್ಟೂಡಿಯೋ ವಿಭಾಗದ ಶ್ರೀ ಜಿ.ಬಿ.ಸಿದ್ದೇಗೌಡ ಹಾಗೂ ವಿಶ್ವವಿದ್ಯಾನಿಲಯದ ಬೋಧಕ ಮತ್ತು ಬೋಧಕೇತರ ನೌಕರರು ಹಾಗೂ ವಿಶೇಷ ಆಹ್ವಾನಿತರು ಭಾಗವಹಿಸಿ ಕಾರ್ಯಕ್ರಮವನ್ನು ಸಂಪನ್ನಗೊಳಿಸಿದರು.





# National Space Day -2025

The National Space Day -2025 was celebrated in collaboration with ISRO- ISTRAC, Bengaluru on 06-08-2025 at Convocation Hall, KSOU, Mukthagangothri, Mysuru. Dr. Nandini Harinath, Deputy Director, ISTRAC welcomed all the dignitaries. Dr. Jasvinder Singh Khoral, Chairman, NSPD Main Committee, ISTRAC explained the importance of National Space Day which is celebrated as a memorable gesture of successful landing of Chandrayaan-3 on the south pole of the moon. Prof. N. K. Lokanath, Vice- Chancellor, University of Mysore, gave a glimpse of space program in India. He encouraged students to interact with ISRO scientists and get awareness about the progress of Indian Space Science. He also advised the students to continuously enhance their knowledge. Prof. Naveen Kumar S .K., Registrar, KSOU, remembered Prof. Vikam Sarabai, the Father of Indian Space Program. He also spoke on the progress of communication system from the ancient days to present day and how ISRO's efforts have revolutionized Indian communication system (advent of 4G, 5G etc) in the recent decades. Prof. Sharanappa V Halse, Vice- Chancellor, KSOU, Mysuru who presided over the event to develop interest and update their knowledge on a daily basis. He also explained the importance of Mathematics by explaining the significant developments in large scale intergration which has applications in various fields including space technology. Dr. M. R. Raghavendra, AD, ISTRAC was the chief guest for the event. He delivered a lecture on the journey of Astronomy and Space Science which was evolved in the ancient times. He also explained how Aryabhata laid foundation for space research over 1500 ago and how ISRO continues the story of knowledge, ambition and progress via various space programs like Chandrayaan, Aditya, Gaganyaan etc. Dr. Nandini Harinath, Deputy Director, ISTRAC gave a sneak peek into ISRO's prestigious missions. She also highlighted the contribution of ancient India towards decimal system and Astronomy. Shiva Prasad, GM, LHWC, LPSC, ISTRAC explained the organization structure of ISRO. He also displayed the live launch videos. Prof. M. Ramanatham Naidu (Dean Academic, KSOU), Dr. Ananda kumar. C. S. (Registrar Evaluation, KSOU), Dr. Chandregowda. N. R. (Dean Study-centres, KSOU), Prof. Niranjan Raj. S. (Finance Officer, KSOU) were also present. A quiz competition was organized for the students in the afternoon. The participating students were given memorabilia from ISRO. More than 2000 students from various schools and colleges actively participated.

# "Revisiting Ranganathan in the Digital Era: The Enduring Relevance of His Contributions to Library and Information Science".

**Dr.Shilpa Rani N.R**
Assistant Professor
DoS&R in Library and Information Science
Karnataka State Open University,
Mukthagangothri, Mysuru 570 006.



As the Library and Information Science (LIS) community commemorates the birth anniversary of Dr. S. R. Ranganathan on 12th August, we are reminded not only of his pioneering role in shaping librarianship in India but also of the enduring relevance of his vision in the rapidly evolving digital information landscape. Widely regarded as the Father of Library Science in India, Ranganathan's contributions—particularly his Five Laws of Library Science, Colon Classification system, and his unwavering emphasis on user-centric service—continue to influence LIS education, research, and professional practice even in the 21st century.

In today's knowledge society, libraries are no longer limited to physical spaces—they are dynamic, hybrid information hubs that support digital literacy, open access, knowledge dissemination, and lifelong learning. Yet, Ranganathan's principles remain foundational. His first law, "Books are for use", now expands to include digital resources, emphasizing access over ownership. His second and third laws—"Every reader his/her book" and "Every book its reader"—

....8

## ಆಡಳಿತ ಮಂಡಳಿ

* ಪ್ರೊ. ಶರಣಪ್ಪ ವಿ. ಹಲಸೆ, ಕುಲಪತಿಗಳು
* ಪ್ರೊ. ನವೀನ್‌ಕುಮಾರ್ ಎಸ್.ಕೆ., ಕುಲಸಚಿವರು
* ಪ್ರೊ. ಎಂ.ರಾಮನಾಥಂ ನಾಯುಡು, ಡೀನ್ (ಶೈಕ್ಷಣಿಕ)
* ಡಾ. ಎನ್.ಆರ್.ಚಂದ್ರೇಗೌಡ, ಡೀನ್(ಅಧ್ಯಯನ ಕೇಂದ್ರ)
* ಪ್ರೊ. ನಿರಂಜನ್‌ರಾಜ್ ಎಸ್., ಹಣಕಾಸು ಅಧಿಕಾರಿ
* ಡಾ. ಆನಂದ್ ಕುಮಾರ್ ಸಿ.ಎಸ್., ಕುಲಸಚಿವರು (ಪರೀಕ್ಷಾಂಗ)

## ಸಂಪಾದಕ ಮಂಡಳಿ

* ಡಾ. ಸಂತೋಷ್ ನಾಯಕ್ ಆರ್, ಸಂಪಾದಕರು
* ಡಾ. ಹರೀಶ ಎನ್, ಉಪ ಸಂಪಾದಕರು
* ಡಾ. ಅವರೆಕಾಡು ವಿಜಯಕುಮಾರ್, ಉಪ ಸಂಪಾದಕರು
* ಡಾ. ಶೀಲಾ ವಿ, ಉಪ ಸಂಪಾದಕರು
* ಶ್ರೀ ಮುನಿಸ್ವಾಮಿ , ಸಂಪಾದಕೀಯ ಸಹಕಾರ



ಬರಹಗಳನ್ನು ksounews@gmail.com ಗೆ ಕಳುಹಿಸುವುದು.

ವಿಳಾಸ

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ**
**ಮುಕ್ತ ಗಂಗೋತ್ರಿ, ಮೈಸೂರು– 570006**

Website: www.ksoumysuru.ac.in
Facebook: www.facebook.com/ksoumysuru
Twitter: www.twitter.com/ksoumysuru









*From Page 7*

anticipate modern personalization algorithms and user behavior analytics in digital library systems. The fourth and fifth laws—"Save the time of the reader" and "The library is a growing organism"—resonate deeply with current trends in user experience design, responsive digital platforms, and scalable information infrastructures.

Dr. Ranganathan was not only a scholar and visionary but also a reformer who tirelessly worked to elevate libraries as essential institutions for national development. His insistence on professional education for librarians laid the groundwork for structured LIS curricula across Indian universities. In the age of artificial intelligence, big data, and digital transformation, his structured and ethical approach to information handling provides both a moral and methodological compass. His foresight in designing systems that could grow with expanding knowledge continues to influence innovations in semantic web technologies, library automation, and digital classification systems.

Dr. Ranganathan's life and work inspire LIS professionals to remain adaptive, user-focused, and ethically grounded. As we face challenges posed by information overload, misinformation, and the digital divide, his legacy reminds us of the timeless values of service, access, organization, and the human element in information practice. Celebrating his birth anniversary is not only a tribute to his contributions but a reaffirmation of our commitment to building informed, inclusive, and empowered knowledge societies rooted in his visionary ideals.

# ಸದ್ಭಾವನಾ ದಿನಾಚರಣೆ

ದಿನಾಂಕ:20.08.2025 ರಂದು ಕರಾಮುವಿಯ ಆಡಳಿತ ಭವನದ ಮುಂಭಾಗದಲ್ಲಿ ಸದ್ಭಾವನಾ ದಿನಾಚರಣೆಯನ್ನು ಆಚರಿಸಲಾಯಿತು. ಧರ್ಮ, ಭಾಷೆ ಹಾಗೂ ರಾಜ್ಯಗಳ ಜನರಲ್ಲಿ ಸೌಹಾರ್ದತೆಯನ್ನು ಉತ್ತೇಜಿಸಿ ಎಲ್ಲರಲ್ಲೂ ಸದ್ಭಾವನೆಯನ್ನು ಮೂಡಿಸಿ ಹಿಂಸಾಚರವನ್ನು ತ್ಯಜಿಸುವಂತೆ ಮಾಡಲು ಈ ಪ್ರತಿಜ್ಞೆಯನ್ನು "ಜಾತಿ, ಧರ್ಮ, ಪ್ರದೇಶ, ಮತ ಅಥವಾ ಭಾಷೆಯ ಬೇಧಭಾವವಿಲ್ಲದೇ ಭಾರತದ ಎಲ್ಲ ಜನತೆಯ ಭಾವೈಕ್ಯ ಮತ್ತು ಸೌಹಾರ್ದಕ್ಕಾಗಿ ಕಾರ್ಯ ನಿರ್ವಹಿಸುತ್ತೇನೆಂದು ಅಲ್ಲದೇ ವೈಯಕ್ತಿಕವಾಗಿಯಾಗಲಿ ಅಥವಾ ಸಾಮೂಹಿಕವಾಗಿಯಾಗಲಿ ನಮ್ಮಲ್ಲಿರುವ ಎಲ್ಲಾ ಬೇಧಭಾವಗಳನ್ನು ಹಿಂಸಾಚಾರಕ್ಕೆ ಅವಕಾಶ ನೀಡದೆ ಸಮಾಲೋಚನೆ ಹಾಗೂ ಸಂವಿಧಾನಾತ್ಮಕ ಕ್ರಮಗಳ ಮೂಲಕ ಪರಿಹರಿಸುತ್ತೇನೆಂದು ಸಹ ಪ್ರತಿಜ್ಞೆ" ಮಾಡುವ ಮೂಲಕ ಸದ್ಭಾವನಾ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಕರಾಮುವಿಯ ಕುಲಸಚಿವರಾದ ಪ್ರೊ.ನವೀನ್ ಕುಮಾರ್ ಎಸ್.ಕೆ, ಡೀನ್ (ಶೈಕ್ಷಣಿಕ)ರಾದ ಪ್ರೊ.ಎಂ.ರಾಮನಾಥಂ ನಾಯುಡು, ಡೀನ್ (ಅಧ್ಯಯನ ಕೇಂದ್ರ) ಡಾ.ಎನ್.ಆರ್ ಚಂದ್ರೇಗೌಡ, ಉಪ ಕುಲಸಚಿವರಾದ ಶ್ರೀ. ಚಂದ್ರೇಶ್.ಆರ್, ಶ್ರೀ ಸಿ.ಪಿ ಸುರೇಶ್, ಭಾಷಾಂತರ ಅಧ್ಯಯನ ವಿಭಾಗದ ಸಂಯೋಜನಾಧಿಕಾರಿಯಾದ ಡಾ. ಅವರೆಕಾಡು ವಿಜಯ್ ಕುಮಾರ್‌ರವರು ಪ್ರತಿಜ್ಞಾವಿಧಿಯನ್ನು ಬೋಧಿಸಿದರು ಹಾಗೂ ವಿಶ್ವವಿದ್ಯಾನಿಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿದರು.